INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -03,May-June, 2026
Page No,109-120
Peer -Reviewed, Refereed Journal

# ದಿವಾನ್ ಟಿ.ಆನಂದ್‌ರಾವ್ ಅವರು ಸರ್ ಎಂ.ವಿಶ್ವೇಶ್ವರಯ್ಯ ಅವರ ಮುನ್ಸೂಚಕ: ಒಂದು ಅವಲೋಕನ

**ಡಾ.ಎನ್.ಜಿ.ಪ್ರಕಾಶ.**[1]

**ಸಾರಾಂಶ:** ಇತ್ತೀಚಿನವರೆಗೂ ಇತಿಹಾಸವನ್ನು ಮುಖ್ಯವಾಗಿ ಮಹಾನ್ ಸಾಮ್ರಾಜ್ಯಗಳು, ರಾಜರು ಮತ್ತು ಪ್ರಸಿದ್ಧ ವ್ಯಕ್ತಿಗಳ ಅಧ್ಯಯನವೆಂದು ಪರಿಗಣಿಸಲಾಗುತ್ತಿತ್ತು. ಇಂತಹ ಅಧ್ಯಯನಗಳು ಭೂತಕಾಲದ ಒಂದು ಸಾಮಾನ್ಯ ಅವಲೋಕನವನ್ನು ಮಾತ್ರ ನೀಡುತ್ತವೆ; ಆದರೆ ಸಮಾಜದ ಸಂಪೂರ್ಣ ಚಿತ್ರಣವನ್ನು ನೀಡಲು ವಿಫಲವಾಗುತ್ತವೆ. ಇತಿಹಾಸದ ಸಮಗ್ರ ಅರಿವನ್ನು ಪಡೆಯಬೇಕಾದರೆ,ಮಹಾನ್ ವ್ಯಕ್ತಿಗಳ ಹಿಂದೆ ಕಾರ್ಯನಿರ್ವಹಿಸಿದ ಆಡಳಿತಗಾರರು, ಅಧಿಕಾರಿಗಳು, ಸಣ್ಣ ಸಂಸ್ಥೆಗಳು ಮತ್ತು ಕಡಿಮೆ ಪ್ರಚಾರ ಪಡೆದ ವ್ಯಕ್ತಿತ್ವಗಳ ಪಾತ್ರವನ್ನು ಅಧ್ಯಯನ ಮಾಡುವುದು ಅಗತ್ಯ. ಇಂತಹ ಅಧ್ಯಯನದ ವಿಧಾನವನ್ನು ಸೂಕ್ಷ್ಮ ಇತಿಹಾಸವೆಂದು ಕರೆಯಲಾಗುತ್ತದೆ. ಇದು ಇತಿಹಾಸದಲ್ಲಿ ಮರೆಮಾಚಲ್ಪಟ್ಟ ಆಯಾಮಗಳನ್ನು ಬೆಳಕಿಗೆ ತಂದು, ಭೂತಕಾಲದ ಸಮಗ್ರ ಚಿತ್ರಣವನ್ನು ನೀಡುತ್ತದೆ. ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಮೈಸೂರು ಸಂಸ್ಥಾನವು ಸ್ವತಂತ್ರ ಭಾರತಕ್ಕೂ ಮುನ್ನವೇ ಒಂದು ಮಾದರಿ ರಾಜ್ಯವಾಗಿ ಖ್ಯಾತಿ ಪಡೆದಿತ್ತು. ಈ ಸಾಧನೆಗೆ ಸಾಮಾನ್ಯವಾಗಿ ಸರ್ ಎಂ.ವಿಶ್ವೇಶ್ವರಯ್ಯ ಅವರ ದೂರದೃಷ್ಟಿಯ ಆಡಳಿತ ಮತ್ತು ಅಭಿವೃದ್ಧಿ ನೀತಿಗಳನ್ನು ಪ್ರಮುಖ ಕಾರಣವೆಂದು ಪರಿಗಣಿಸಲಾಗುತ್ತದೆ. ಆದರೆ ಯಾವುದೇ ಮಹತ್ತರ ಪರಿವರ್ತನೆ ಒಬ್ಬ ವ್ಯಕ್ತಿಯ ಪ್ರಯತ್ನದಿಂದ ಮಾತ್ರ ಸಾಧ್ಯವಾಗುವುದಿಲ್ಲ. ಅದರ ಹಿಂದೆ ಅನೇಕ ಆಡಳಿತಾತ್ಮಕ, ರಾಜಕೀಯ ಮತ್ತು ಸಾಂಸ್ಥಿಕ ಪ್ರಕ್ರಿಯೆಗಳು ಕಾರ್ಯನಿರ್ವಹಿಸುತ್ತವೆ. ಈ ಹಿನ್ನೆಲೆಯಲ್ಲಿಯೇ ಮೈಸೂರು ಸಂಸ್ಥಾನದ ದಿವಾನರಾಗಿ ಸೇವೆ ಸಲ್ಲಿಸಿದ ಪ್ರಧಾನ ಶಿರೋಮಣಿ ಟಿ.ಆನಂದ ರಾವ್ ಅವರ ಪಾತ್ರವನ್ನು ಮರುಪರಿಶೀಲಿಸುವುದು ಅಗತ್ಯವಾಗುತ್ತದೆ. ಟಿ.ಆನಂದರಾವ್ ಅವರನ್ನು ಸಾಮಾನ್ಯವಾಗಿ ಎರಡು ಯುಗಗಳ ನಡುವಿನ ಪರಿವರ್ತನಾ ಹಂತದ ಆಡಳಿತಗಾರರಿದ್ದರು. ಅವರು ಆಡಳಿತಾತ್ಮಕ ಸ್ಥಿರತೆ, ಆರ್ಥಿಕ

[1].ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ,ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಾಗಮಂಗಲ, ಮಂಡ್ಯ ಜಿಲ್ಲೆ.

ಶಿಸ್ತು, ಅಭಿವೃದ್ಧಿ ಯೋಜನೆಗಳ ರೂಪುರೇಷೆ ಹಾಗೂ ಸಂಸ್ಥಾನದಲ್ಲಿ ಆಧುನಿಕೀಕರಣದ ಅಗತ್ಯವನ್ನು ಗುರುತಿಸಿ, ಭವಿಷ್ಯದ ಅಭಿವೃದ್ಧಿಗೆ ದೃಢವಾದ ಅಡಿಪಾಯ ಹಾಕಿದರು. ಸರ್ ಎಂ.ವಿಶ್ವೇಶ್ವರಯ್ಯ ಅವರನ್ನು ಮೈಸೂರು ರಾಜ್ಯದ ಮುಖ್ಯ ಎಂಜಿನಿಯರ್ ಹುದ್ದೆಗೆ ನೇಮಿಸುವಲ್ಲಿ ಅವರ ದೂರದೃಷ್ಟಿಯ ನಿರ್ಧಾರವು ಮುಂದಿನ ದಿನಗಳಲ್ಲಿ ಮೈಸೂರಿನ ಕೈಗಾರಿಕಾ, ತಾಂತ್ರಿಕ ಮತ್ತು ಆರ್ಥಿಕ ಪ್ರಗತಿಗೆ ನಿರ್ಣಾಯಕ ಕಾರಣವಾಯಿತು. ಮೈಸೂರು ರಾಜ್ಯದ ಆಧುನಿಕ ಅಭಿವೃದ್ಧಿಯ ಇತಿಹಾಸವನ್ನು ಅರ್ಥಮಾಡಿಕೊಳ್ಳಲು ಸರ್.ಎಂ.ವಿಶ್ವೇಶ್ವರಯ್ಯ ಅವರ ಸಾಧನೆಗಳಿಗೆ ದಾರಿಮಾಡಿಕೊಟ್ಟ ಆಡಳಿತಾತ್ಮಕ ಪರಿಸರವನ್ನು ನಿರ್ಮಿಸಿದ ಟಿ.ಆನಂದ ರಾವ್ ಅವರ ಪಾತ್ರವನ್ನು ಅಧ್ಯಯನ ಮಾಡುವುದು ಅತ್ಯಗತ್ಯವಾಗಿದೆ. ಪ್ರಸ್ತುತ ದಿವಾನ್ ಟಿ.ಆನಂದರಾವ್ ಅವರ ಜೀವನ, ಆಡಳಿತಾತ್ಮಕ ದೃಷ್ಟಿಕೋನ, ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಮೈಸೂರು ಸಂಸ್ಥಾನದ ಆಧುನಿಕೀಕರಣಕ್ಕೆ ಅವರು ನೀಡಿದ ಕೊಡುಗೆಗಳನ್ನು ಸಮಗ್ರವಾಗಿ ವಿಶ್ಲೇಷಿಸಲಾಗುತ್ತದೆ.

**ಪ್ರಮುಖ ಪದಗಳು:** ಮೈಸೂರು ರಾಜ್ಯ, ಮೈಸೂರಿನ ದಿವಾನರು, ದಿವಾನ್ ಟಿ.ಆನಂದ್ ರಾವ್, ಆರ್ಥಿಕ ಸಮ್ಮೇಳನ, ಆಡಳಿತ ಸುಧಾರಣೆಗಳು, ಆಧುನಿಕೀಕರಣ, ಸರ್ ಎಂ.ವಿಶ್ವೇಶ್ವರಯ್ಯ, ಸಂಸ್ಥಾನಿಕ ಆಡಳಿತ, ಅಭಿವೃದ್ಧಿ ಯೋಜನೆಗಳು, ಮೈಸೂರು ಪುನರುತ್ಥಾನ.

**ಸಂಶೋಧನಾ ಅಂತರ:** ಮೈಸೂರು ಸಂಸ್ಥಾನದ ಇತಿಹಾಸದ ಕುರಿತಾದ ಹೆಚ್ಚಿನ ಅಧ್ಯಯನಗಳು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್ ಎಂ.ವಿಶ್ವೇಶ್ವರಯ್ಯ, ಮೈಸೂರಿನ ಕೈಗಾರಿಕಾ ಮತ್ತು ಸಾಮಾಜಿಕ ಅಭಿವೃದ್ಧಿಯ ಮೇಲೆ ಕೇಂದ್ರೀಕೃತವಾಗಿವೆ. ಆದರೆ ಈ ಸಾಧನೆಗಳಿಗೆ ಅಡಿಪಾಯ ಹಾಕಿದ ಆಡಳಿತಾತ್ಮಕ ನಾಯಕರ ಪಾತ್ರಕ್ಕೆ ತಕ್ಕ ಮಟ್ಟಿನ ಗಮನ ದೊರೆತಿಲ್ಲ. 1909 ರಿಂದ 1912ರ ಅವಧಿಯಲ್ಲಿ ಮೈಸೂರು ರಾಜ್ಯದ ದಿವಾನರಾಗಿ ಕಾರ್ಯನಿರ್ವಹಿಸಿದ ಟಿ.ಆನಂದರಾವ್ ಅವರ ಜೀವನ, ಆಡಳಿತಾತ್ಮಕ ದೃಷ್ಟಿಕೋನ ಮತ್ತು ಅಭಿವೃದ್ಧಿ ಚಿಂತನೆಗಳ ಕುರಿತು ಸಮಗ್ರ ಅಧ್ಯಯನಗಳು ವಿರಳವಾಗಿವೆ. ಇತಿಹಾಸದ ಮುಖ್ಯವಾಹಿನಿಯಲ್ಲಿ ಹೆಚ್ಚಿನ ಪ್ರಚಾರ ಪಡೆಯದಿದ್ದರೂ ಮೈಸೂರು ರಾಜ್ಯದ ಆಧುನಿಕೀಕರಣಕ್ಕೆ ಪ್ರಮುಖ ಕೊಡುಗೆ ನೀಡಿದ ಟಿ.ಆನಂದ್‌ರಾವ್ ಅವರ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ಬೆಳಕಿಗೆ ತರುವುದು ಈ ಅಧ್ಯಯನದ ಪ್ರಮುಖ ಸಂಶೋಧನಾ ಅಂತರವಾಗಿದೆ. ಈ ಮೂಲಕ ಇತಿಹಾಸದಲ್ಲಿ ನಿರ್ಲಕ್ಷಿಸಲ್ಪಟ್ಟ ವ್ಯಕ್ತಿತ್ವಗಳನ್ನು ಮುಖ್ಯವಾಹಿನಿಯ ಚರ್ಚೆಗೆ ತರುವ ಪ್ರಯತ್ನ ಮಾಡಲಾಗಿದೆ.

**ಸಂಶೋಧನಾ ವಿಧಾನ:** ಈ ಅಧ್ಯಯನವು ಗುಣಾತ್ಮಕ ಸಂಶೋಧನಾ ವಿಧಾನವನ್ನು ಅನುಸರಿಸಿದೆ. ಅಧ್ಯಯನಕ್ಕಾಗಿ ಕೆಳಗಿನ ವಿಧಾನಗಳನ್ನು ಬಳಸಲಾಗಿದೆ. ಅವುಗಳೆಂದರೆ;

**ಸಾಹಿತ್ಯ ವಿಮರ್ಶೆ:** ಮೈಸೂರು ಸಂಸ್ಥಾನದ ಇತಿಹಾಸ, ದಿವಾನರ ಆಡಳಿತ, ಆರ್ಥಿಕ ನೀತಿಗಳು ಹಾಗೂ ಟಿ.ಆನಂದ್ ರಾವ್ ಅವರ ಕುರಿತಾಗಿ ಲಭ್ಯವಿರುವ ಪುಸ್ತಕಗಳು, ಸಂಶೋಧನಾ ಲೇಖನಗಳು, ವರದಿಗಳು ಮತ್ತು ಸರ್ಕಾರಿ ದಾಖಲೆಗಳನ್ನು ಪರಿಶೀಲಿಸಲಾಗಿದೆ.

**ಕ್ಷೇತ್ರ ಸಮೀಕ್ಷೆ:** ಮೈಸೂರು ಮತ್ತು ಸಂಬಂಧಿತ ಐತಿಹಾಸಿಕ ಕೇಂದ್ರಗಳಿಗೆ ಭೇಟಿ ನೀಡಿ, ಸ್ಥಳೀಯ ದಾಖಲೆಗಳು, ಸ್ಮಾರಕಗಳು ಹಾಗೂ ಐತಿಹಾಸಿಕ ಮೂಲಗಳನ್ನು ಪರಿಶೀಲಿಸಲಾಗಿದೆ.

**ವಿದ್ವಾಂಸರೊಂದಿಗೆ ಚರ್ಚೆ:** ಇತಿಹಾಸಕಾರರು, ಸಂಶೋಧಕರು ಮತ್ತು ಮೈಸೂರು ಇತಿಹಾಸದ ಪರಿಣಿತರೊಂದಿಗೆ ಚರ್ಚೆ ನಡೆಸಿ, ಟಿ.ಆನಂದ್‌ರಾವ್ ಅವರ ಆಡಳಿತ ಮತ್ತು ಕೊಡುಗೆಗಳ ಕುರಿತು ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ದಾಖಲೆಗಳ ವಿಶ್ಲೇಷಣೆ:** ಮೈಸೂರು ಸರ್ಕಾರದ ಆಡಳಿತ ವರದಿಗಳು, ಆರ್ಥಿಕ ಸಮ್ಮೇಳನದ ದಾಖಲೆಗಳು ಮತ್ತು ಸಮಕಾಲೀನ ಮೂಲಗಳನ್ನು ವಿಶ್ಲೇಷಿಸಲಾಗಿದೆ.

**ಅಧ್ಯಯನದ ಮಹತ್ವ:** ಮೈಸೂರು ಸಂಸ್ಥಾನದ ಅಭಿವೃದ್ಧಿಯ ಇತಿಹಾಸದಲ್ಲಿ ಸರ್ ಎಂ.ವಿಶ್ವೇಶ್ವರಯ್ಯ ಅವರ ಹೆಸರು ಅತ್ಯಂತ ಗೌರವದಿಂದ ಉಲ್ಲೇಖಿಸಲ್ಪಡುತ್ತದೆ. ಅವರ ಅಸಾಧಾರಣ ಸಾಧನೆಗಳು ಮತ್ತು ದೂರದೃಷ್ಟಿಯ ಯೋಜನೆಗಳು ಭಾರತೀಯ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದಿವೆ. ಆದರೆ ವಿಶ್ವೇಶ್ವರಯ್ಯ ಅವರ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಸೂಕ್ತ ಅವಕಾಶವನ್ನು ಕಲ್ಪಿಸಿದ ಆಡಳಿತಾತ್ಮಕ ನಾಯಕನಾಗಿ ದಿವಾನ್ ಟಿ.ಆನಂದ್‌ರಾವ್ ಅವರ ಪಾತ್ರವನ್ನು ಕಡೆಗಣಿಸಲಾಗುವುದಿಲ್ಲ. ಸರ್.ಎಂ.ವಿ. ಅವರ ಪ್ರಕಾಶಮಾನ ವ್ಯಕ್ತಿತ್ವದ ಬೆಳಕಿನಲ್ಲಿ ಟಿ.ಆನಂದ್ ರಾವ್ ಅವರ ಕೊಡುಗೆಗಳು ಸ್ವಲ್ಪ ಮಸುಕಾಗಿವೆ. ವಾಸ್ತವವಾಗಿ, ವಿಶ್ವೇಶ್ವರಯ್ಯ ಅವರು ಮೈಸೂರು ರಾಜ್ಯದ ಅಭಿವೃದ್ಧಿಯ ಸಂಕೇತವಾಗಿದ್ದರೆ, ಆ ಅಭಿವೃದ್ಧಿಯ ಮೂಲಭೂತ ನೆಲೆಯನ್ನು ನಿರ್ಮಿಸಿದವರಲ್ಲಿ ಟಿ.ಆನಂದ್‌ರಾವ್ ಪ್ರಮುಖರಾಗಿದ್ದರು. ಸರ್.ಎಂ.ವಿಶ್ವೇಶ್ವರಯ್ಯ ಅವರನ್ನು ಮುಖ್ಯ ಎಂಜಿನಿಯರ್ ಹುದ್ದೆಗೆ ನೇಮಿಸುವ ಮೂಲಕ ಅವರು ಮೈಸೂರು ರಾಜ್ಯದ ಭವಿಷ್ಯದ ಅಭಿವೃದ್ಧಿಗೆ ದಿಕ್ಕು ತೋರಿದರು. ಆದ್ದರಿಂದ, ವಿಶ್ವೇಶ್ವರಯ್ಯ ಅವರ ನೆರಳಿನಲ್ಲಿ ಅಡಗಿಹೋಗಿರುವ ದಿವಾನ್ ಟಿ.ಆನಂದ್ ರಾವ್ ಅವರ ವ್ಯಕ್ತಿತ್ವ, ಆಡಳಿತ ಸಾಮರ್ಥ್ಯ ಮತ್ತು ಐತಿಹಾಸಿಕ ಕೊಡುಗೆಗಳನ್ನು ಬೆಳಕಿಗೆ ತರುವುದೇ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಈ ಅಧ್ಯಯನವು ಮೈಸೂರು ಸಂಸ್ಥಾನದ ಇತಿಹಾಸವನ್ನು ಹೆಚ್ಚು ಸಮಗ್ರವಾಗಿ ಅರ್ಥಮಾಡಿಕೊಳ್ಳಲು ನೆರವಾಗುವುದರ ಜೊತೆಗೆ, ಇತಿಹಾಸದಲ್ಲಿ ಮರೆಮಾಚಲ್ಪಟ್ಟ ವ್ಯಕ್ತಿತ್ವಗಳ ಮಹತ್ವವನ್ನು ಪುನರುಜ್ಜೀವನಗೊಳಿಸುತ್ತದೆ.

**ಪೀಠಿಕೆ:** ಕರ್ನಾಟಕದ ಇತಿಹಾಸದಲ್ಲಿ ಮೈಸೂರು ಸಂಸ್ಥಾನವು ಸುಸಂಘಟಿತ ಆಡಳಿತ, ಪ್ರಗತಿಪರ ನೀತಿಗಳು ಹಾಗೂ ಅಭಿವೃದ್ಧಿ ಕಾರ್ಯಗಳ ಮೂಲಕ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಮೈಸೂರು ಒಡೆಯರ

ಆಳ್ವಿಕೆಯಲ್ಲಿ ದಿವಾನರ ಹುದ್ದೆ ರಾಜ್ಯದ ಅತ್ಯುನ್ನತ ಆಡಳಿತಾತ್ಮಕ ಹುದ್ದೆಯಾಗಿದ್ದು, ರಾಜನ ಅನಂತರ ರಾಜ್ಯದ ಆಡಳಿತದ ಸಂಪೂರ್ಣ ಹೊಣೆಗಾರಿಕೆಯನ್ನು ದಿವಾನರು ನಿರ್ವಹಿಸುತ್ತಿದ್ದರು. ಮೈಸೂರಿನ ಆಧುನಿಕ ಅಭಿವೃದ್ಧಿಯ ಇತಿಹಾಸವನ್ನು ಅವಲೋಕಿಸಿದಾಗ, ದಿವಾನರು ರಾಜ್ಯದ ಆಡಳಿತ, ಆರ್ಥಿಕತೆ, ಶಿಕ್ಷಣ, ಕೃಷಿ, ನೀರಾವರಿ ಹಾಗೂ ಕೈಗಾರಿಕಾ ಕ್ಷೇತ್ರಗಳ ಪ್ರಗತಿಯಲ್ಲಿ ಮಹತ್ವದ ಪಾತ್ರ ವಹಿಸಿರುವುದು ಸ್ಪಷ್ಟವಾಗುತ್ತದೆ. 1831ರಲ್ಲಿ ಬ್ರಿಟಿಷರು ಮೈಸೂರು ರಾಜ್ಯದ ನೇರ ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಂಡ ಅನಂತರ ಸುಮಾರು ಐವತ್ತು ವರ್ಷಗಳ ಕಾಲ ರಾಜ್ಯದ ಆಡಳಿತವನ್ನು ಬ್ರಿಟಿಷ್ ಆಯುಕ್ತರು ನಡೆಸಿದರು. ಈ ಅವಧಿಯಲ್ಲಿ ಮೈಸೂರು ಸಂಸ್ಥಾನವು ಬ್ರಿಟಿಷರ ನಿಯಂತ್ರಣದಲ್ಲಿದ್ದರೂ, ರಾಜ್ಯದ ಆಡಳಿತಾತ್ಮಕ ವ್ಯವಸ್ಥೆ ಮತ್ತು ಆರ್ಥಿಕ ಸ್ಥಿತಿಯಲ್ಲಿ ಹಲವಾರು ಬದಲಾವಣೆಗಳು ಸಂಭವಿಸಿದವು. ಅನಂತರ, 1881ರ ಮಾರ್ಚ್ 25 ರಂದು ನಡೆದ ಒಪ್ಪಂದದ ಮೂಲಕ ಮೈಸೂರು ರಾಜ್ಯದ ಆಡಳಿತವನ್ನು ಮತ್ತೆ ಒಡೆಯರ್ ವಂಶಕ್ಕೆ ಹಸ್ತಾಂತರಿಸಲಾಯಿತು. ಇದರೊಂದಿಗೆ ಹತ್ತನೇ ಚಾಮರಾಜ ಒಡೆಯರ್ ಅವರು ಮೈಸೂರು ಸಂಸ್ಥಾನದ ಆಡಳಿತವನ್ನು ವಹಿಸಿಕೊಂಡರು. ಇವರ ಆಡಳಿತಾವಧಿಯಲ್ಲಿ ಸಿ.ರಂಗಚಾರ್ಲು ಮತ್ತು ಕೆ.ಶೇಷಾದ್ರಿ ಐಯ್ಯಾರ್ ಅವರು ದಿವಾನರಾಗಿ ಸೇವೆ ಸಲ್ಲಿಸಿ ಮೈಸೂರು ಸಂಸ್ಥಾನದ ಆಡಳಿತಾತ್ಮಕ ಪುನರ್‌ವ್ಯವಸ್ಥೆ ಹಾಗೂ ಅಭಿವೃದ್ಧಿಗೆ ಅಡಿಪಾಯ ಹಾಕಿದರು. ಇವರ ದೂರದೃಷ್ಟಿಯ ಆಡಳಿತವು ಮುಂದಿನ ದಿನಗಳಲ್ಲಿ ಮೈಸೂರು ರಾಜ್ಯವು ಮಾದರಿ ಸಂಸ್ಥಾನವಾಗಿ ರೂಪುಗೊಳ್ಳಲು ನೆರವಾಯಿತು. ಇವರ ನಿಧನದ ಅನಂತರ ರಾಜರ್ಷಿ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅಧಿಕಾರ ವಹಿಸಿಕೊಂಡರು. ಮೈಸೂರು ಇತಿಹಾಸದಲ್ಲಿ ಇವರ ಆಳ್ವಿಕೆಯು ಸುವರ್ಣಯುಗವೆಂದು ಪರಿಗಣಿಸಲ್ಪಡುತ್ತದೆ. ಸುಮಾರು ನಾಲ್ಕು ದಶಕಗಳ ಕಾಲ ಮುಂದುವರಿದ ಇವರ ಆಡಳಿತದಲ್ಲಿ ಶಿಕ್ಷಣ, ಕೈಗಾರಿಕೆ, ನೀರಾವರಿ, ವಿದ್ಯುತ್, ಆರೋಗ್ಯ, ಸ್ಥಳೀಯ ಸ್ವರಾಜ್ಯ ಮತ್ತು ಸಾರ್ವಜನಿಕ ಆಡಳಿತ ಕ್ಷೇತ್ರಗಳಲ್ಲಿ ಮಹತ್ವದ ಸುಧಾರಣೆಗಳು ಜಾರಿಗೆ ಬಂದವು. ಈ ಅವಧಿಯಲ್ಲಿ ಮೈಸೂರು ರಾಜ್ಯವು ಭಾರತದ ಅತ್ಯಂತ ಪ್ರಗತಿಪರ ಸಂಸ್ಥಾನಗಳಲ್ಲಿ ಒಂದಾಗಿ ಹೊರಹೊಮ್ಮಿತು. ಇವರ ಆಡಳಿತದಲ್ಲಿ ಪಿ.ಎಂ.ಕೃಷ್ಣಮೂರ್ತಿ, ವಿ.ಪಿ.ಮಾಧವರಾವ್, ಟಿ.ಆನಂದರಾವ್, ಸರ್ ಎಂ.ವಿಶ್ವೇಶ್ವರಯ್ಯ, ಎಂ.ಕಾಂತರಾಜ್ ಅರಸ್, ಎ.ಆರ್.ಬ್ಯಾನರ್ಜಿ, ಮಿರ್ಜಾ ಇಸ್ಮಾಯಿಲ್ ಹೀಗೆ ಏಳು ಪ್ರಮುಖ ದಿವಾನರು ಸೇವೆ ಸಲ್ಲಿಸಿದರು. ಈ ದಿವಾನರು ತಮ್ಮದೇ ಆದ ವಿಶಿಷ್ಟ ಆಡಳಿತಾತ್ಮಕ ಕೊಡುಗೆಗಳ ಮೂಲಕ ಮೈಸೂರು ರಾಜ್ಯದ ಪ್ರಗತಿಗೆ ಕಾರಣರಾದರು. ಆದರೆ ಇವರಲ್ಲಿ ಕೆಲವರ ಹೆಸರುಗಳು ಇತಿಹಾಸದಲ್ಲಿ ಹೆಚ್ಚು ಪ್ರಸಿದ್ಧಿ ಪಡೆದರೆ, ಕೆಲವು ವ್ಯಕ್ತಿತ್ವಗಳು ನಿರ್ಲಕ್ಷ್ಯಕ್ಕೊಳಗಾದವರಿದ್ದಾರೆ. ಅಂತಹವರಲ್ಲಿ ದಿವಾನ್ ಟಿ.ಆನಂದ ರಾವ್ ಅವರು ಪ್ರಮುಖರು.

ಟಿ.ಆನಂದರಾವ್ ಅವರು 1909 ರಿಂದ 1912ರವರೆಗೆ ಮೈಸೂರು ಸಂಸ್ಥಾನದ ದಿವಾನರಾಗಿ ಕಾರ್ಯನಿರ್ವಹಿಸಿದರು. ಅವರ ಆಡಳಿತಾವಧಿ ತುಲನಾತ್ಮಕವಾಗಿ ಕಡಿಮೆಯಾಗಿದ್ದರೂ, ಮೈಸೂರು ರಾಜ್ಯದ ಭವಿಷ್ಯದ ಅಭಿವೃದ್ಧಿಗೆ ಅಗತ್ಯವಾದ ಆಡಳಿತಾತ್ಮಕ ಸ್ಥಿರತೆ, ಆರ್ಥಿಕ ಯೋಜನೆಗಳು ಮತ್ತು ಸಂಸ್ಥಾನಿಕ ಸುಧಾರಣೆಗಳನ್ನು ರೂಪಿಸುವಲ್ಲಿ ಅವರು ಮಹತ್ವದ ಪಾತ್ರವಹಿಸಿದರು. ಸರ್.ಎಂ.ವಿಶ್ವೇಶ್ವರಯ್ಯ ಅವರ ಪ್ರತಿಭೆಯನ್ನು ಗುರುತಿಸಿ ಅವರನ್ನು ಮೈಸೂರು ರಾಜ್ಯದ ಮುಖ್ಯ ಎಂಜಿನಿಯರ್ ಹುದ್ದೆಗೆ ಕರೆತರುವ ಮೂಲಕ ಮೈಸೂರು ರಾಜ್ಯದ ಆಧುನಿಕೀಕರಣಕ್ಕೆ ಬುನಾದಿ ಹಾಕಿದರು.

ಪ್ರಧಾನ ಶಿರೋಮಣಿ ದಿವಾನ್ ಟಿ.ಆನಂದ ರಾವ್ ಅವರು 1909 ರಿಂದ 1912ರವರೆಗೆ ಮೈಸೂರು ಸಂಸ್ಥಾನದ ದಿವಾನರಾಗಿ ಸೇವೆ ಸಲ್ಲಿಸಿದ ಪ್ರಮುಖ ಆಡಳಿತಗಾರರಲ್ಲಿ ಒಬ್ಬರಾಗಿದ್ದಾರೆ. ಮೈಸೂರು ರಾಜ್ಯದ ಆಧುನಿಕೀಕರಣದ ಇತಿಹಾಸದಲ್ಲಿ ಅವರ ಪಾತ್ರವು ಅತ್ಯಂತ ಮಹತ್ವದ್ದಾಗಿದ್ದರೂ, ಇತಿಹಾಸದ ಮುಖ್ಯವಾಹಿನಿ ಚರ್ಚೆಗಳಲ್ಲಿ ಅವರಿಗೆ ತಕ್ಕಷ್ಟು ಪ್ರಾಮುಖ್ಯತೆ ದೊರೆತಿಲ್ಲ. ಸರ್.ಎಂ.ವಿಶ್ವೇಶ್ವರಯ್ಯ ಅವರ ಸಾಧನೆಗಳ ಹಿಂದೆ ದೃಢವಾದ ಆಡಳಿತಾತ್ಮಕ ನೆಲೆಯನ್ನು ನಿರ್ಮಿಸಿದ ವ್ಯಕ್ತಿಯಾಗಿ ಟಿ.ಆನಂದ ರಾವ್ ಅವರನ್ನು ಗುರುತಿಸಬಹುದು. ಇವರು 1852ನೇ ಮೇ 15ರಂದು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಪ್ರತಿಷ್ಠಿತ ಕುಟುಂಬದಲ್ಲಿ ಜನಿಸಿದರು. ಅವರ ಕುಟುಂಬವು ಆಡಳಿತ ಕ್ಷೇತ್ರದಲ್ಲಿ ವಿಶಿಷ್ಟ ಪರಂಪರೆಯನ್ನು ಹೊಂದಿತ್ತು. ಅವರ ತಂದೆ ಟಿ.ಮಾಧವರಾವ್ ಅವರು ಬರೋಡಾ ಮತ್ತು ತಿರುವಾಂಕೂರು ಸಂಸ್ಥಾನಗಳ ದಿವಾನರಾಗಿ ಸೇವೆ ಸಲ್ಲಿಸಿದ್ದರು. ಇವರ ಆಡಳಿತಾತ್ಮಕ ಸಾಧನೆಗಳನ್ನು ಗುರುತಿಸಿದ ಬ್ರಿಟಿಷ್ ಸರ್ಕಾರವು ಅವರಿಗೆ ರಾಜಾ ಮತ್ತು ಸರ್ ಎಂಬ ಗೌರವ ಬಿರುದುಗಳನ್ನು ನೀಡಿತ್ತು. 1887–88ರಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮದ್ರಾಸ್ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿಯೂ ಅವರು ಕಾರ್ಯನಿರ್ವಹಿಸಿದ್ದರು. ಈ ರೀತಿಯ ಆಡಳಿತಾತ್ಮಕ ಮತ್ತು ಬೌದ್ಧಿಕ ಪರಂಪರೆಯ ವಾತಾವರಣದಲ್ಲಿ ಬೆಳೆದ ಟಿ.ಆನಂದ ರಾವ್ ಅವರು ಬಾಲ್ಯದಿಂದಲೇ ಸಾರ್ವಜನಿಕ ಜೀವನ ಮತ್ತು ಆಡಳಿತದ ಬಗ್ಗೆ ಆಸಕ್ತಿಯನ್ನು ಹೆಚ್ಚು ಹೆಚ್ಚು ಬೆಳೆಸಿಕೊಂಡರು. ಟಿ.ಆನಂದ ರಾವ್ ಅವರು 1871ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಬಿ.ಎ. ಪದವಿಯನ್ನು ಪಡೆದರು. ಉನ್ನತ ಶಿಕ್ಷಣವನ್ನು ಪೂರ್ಣಗೊಳಿಸಿದ ಅನಂತರ ತಿರುವಾಂಕೂರು ಮತ್ತು ಇಂದೋರ್‌ನ ಹೊಳ್ಕರ್ ರಾಜಮನೆತನಗಳ ರಾಜಕುಮಾರರಿಗೆ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಈ ಅನುಭವವು ಅವರಿಗೆ ರಾಜಕೀಯ, ಆಡಳಿತ ಮತ್ತು ಸಾಮಾಜಿಕ ವಿಷಯಗಳ ಬಗ್ಗೆ ವಿಶಾಲ ದೃಷ್ಟಿಕೋನವನ್ನು ರೂಪಿಸಿಕೊಟ್ಟಿತು. ಮೈಸೂರು ಸಂಸ್ಥಾನದಲ್ಲಿ ಅವರ ಆಡಳಿತಾತ್ಮಕ ಜೀವನವು ದಿವಾನ್ ಸಿ.ರಂಗಚಾರ್ಲು ಅವರ ಕಾಲದಲ್ಲಿ ಆರಂಭವಾಯಿತು. 1873ರಲ್ಲಿ ರಂಗಾಚಾರ್ಲು ಅವರು ಟಿ.ಆನಂದ ರಾವ್ ಅವರನ್ನು ತಮ್ಮ ಸಹಾಯಕರಾಗಿ ನೇಮಿಸಿಕೊಂಡರು. ಅನಂತರ ಅವರು ವಿವಿಧ ಹುದ್ದೆಗಳಲ್ಲಿ

ಸೇವೆ ಸಲ್ಲಿಸುತ್ತಾ ಕ್ರಮೇಣ ಉನ್ನತ ಆಡಳಿತಾಧಿಕಾರಿಯಾಗಿ ಬೆಳೆದರು. ಜಿಲ್ಲಾ ಮ್ಯಾಜಿಸ್ಟ್ರೇಟ್, ವಿವಿಧ ಜಿಲ್ಲೆಗಳ ಆಡಳಿತಾಧಿಕಾರಿ, ಮೈಸೂರಿನ ಡೆಪ್ಯೂಟಿ ಕಮಿಷನರ್, ಸಂಖ್ಯಾಶಾಸ್ತ್ರ ವಿಭಾಗದ ಮುಖ್ಯಸ್ಥ ಹಾಗೂ ಮೈಸೂರು ಸಂಸ್ಥಾನದ ಮುಖ್ಯ ಕಾರ್ಯದರ್ಶಿ ಸೇರಿದಂತೆ ಹಲವಾರು ಪ್ರಮುಖ ಹುದ್ದೆಗಳನ್ನು ನಿರ್ವಹಿಸಿದರು. ಈ ಹಂತಗಳಲ್ಲಿ ಪಡೆದ ಅನುಭವವು ಅವರನ್ನು ಸಮರ್ಥ ಆಡಳಿತಗಾರರನ್ನಾಗಿ ರೂಪಿಸಿತು. 1906ರಲ್ಲಿ ಅವರು ದಿವಾನರ ಮಂಡಳಿಯ ಸದಸ್ಯರಾಗಿ ನೇಮಕಗೊಂಡರು ಮತ್ತು ಆಡಳಿತದ ಉನ್ನತ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಅವಕಾಶ ಪಡೆದರು. ಅನಂತರ 1909ರಲ್ಲಿ ದಿವಾನ್ ವಿ.ಪಿ.ಮಾಧವರಾವ್ ಅವರ ಉತ್ತರಾಧಿಕಾರಿಯಾಗಿ ಮೈಸೂರು ಸಂಸ್ಥಾನದ ದಿವಾನರಾಗಿ ಅಧಿಕಾರ ಸ್ವೀಕರಿಸಿದರು. ಟಿ.ಆನಂದ ರಾವ್ ಅವರ ಆಡಳಿತದಲ್ಲಿ ಸಮತೋಲನ ಮತ್ತು ವಿವೇಕವು ಪ್ರಮುಖ ಲಕ್ಷಣವಾಗಿತ್ತು. ಅವರು ಬ್ರಿಟಿಷ್ ಸರ್ಕಾರದೊಂದಿಗೆ ಅನಗತ್ಯ ಸಂಘರ್ಷವನ್ನು ತಪ್ಪಿಸಿಕೊಂಡು, ಅದೇ ಸಮಯದಲ್ಲಿ ಮೈಸೂರು ಸಂಸ್ಥಾನದ ಹಿತಾಸಕ್ತಿಗಳನ್ನು ಕಾಪಾಡುವ ನೀತಿಯನ್ನು ಅನುಸರಿಸಿದರು. ಸಂಸ್ಥಾನದ ಅಭಿವೃದ್ಧಿಯನ್ನು ಸಾಧಿಸುವಾಗ ಬ್ರಿಟಿಷ್ ಸರ್ಕಾರದ ಅನುಮಾನ ಅಥವಾ ವಿರೋಧಕ್ಕೆ ಗುರಿಯಾಗಬಾರದು ಎಂಬುದು ಅವರ ಆಡಳಿತದ ಮೂಲತತ್ವವಾಗಿತ್ತು. ಇದನ್ನು ಕೆಲವು ಇತಿಹಾಸಕಾರರು ರಕ್ಷಾಕವಚ ಸಿದ್ಧಾಂತ ಎಂದು ಕರೆಯುತ್ತಾರೆ. ಅವರು ಮಹಾರಾಜರೊಂದಿಗೆ ಸಹಕಾರಾತ್ಮಕ ಸಂಬಂಧವನ್ನು ಕಾಪಾಡಿಕೊಂಡು ಆಡಳಿತ ನಡೆಸಿದರು. ಟಿ.ಆನಂದ ರಾವ್ ಅವರು ಕೇವಲ ಆಡಳಿತಗಾರರಷ್ಟೇ ಅಲ್ಲ, ಸಾಹಿತ್ಯಾಸಕ್ತರಾಗಿದ್ದರು. ಅವರು ಇಂಗ್ಲೆಂಡ್‌ನ ಪ್ರಸಿದ್ಧ ರಾಜಕಾರಣಿ ವಿಲಿಯಂ ಈವಾರ್ಟ್ ಗ್ಲಾಡ್‌ಸ್ಟೋನ್ ಅವರನ್ನು ತಮ್ಮ ಆದರ್ಶ ವ್ಯಕ್ತಿಯಾಗಿ ಪರಿಗಣಿಸುತ್ತಿದ್ದರು. ಉತ್ತಮ ಸಾಹಿತ್ಯ ಮತ್ತು ರಾಜಕೀಯ ಗ್ರಂಥಗಳ ಅಧ್ಯಯನದಲ್ಲಿ ಆಸಕ್ತಿ ಹೊಂದಿದ್ದ ಅವರು ತಮ್ಮ ಸಾಮರ್ಥ್ಯ ಮತ್ತು ಮಿತಿಗಳನ್ನು ಸ್ಪಷ್ಟವಾಗಿ ಅರಿತಿದ್ದ ವಾಸ್ತವವಾದಿ ಆಡಳಿತಗಾರರಾಗಿದ್ದರು. ಅವರ ದಿವಾನಗಿರಿಯ ಅವಧಿಯು ಮೈಸೂರು ರಾಜ್ಯದ ಭವಿಷ್ಯದ ಅಭಿವೃದ್ಧಿಗೆ ಅತ್ಯಂತ ಮಹತ್ವದ ಅಡಿಪಾಯವನ್ನು ಹಾಕಿದ ಅವಧಿಯಾಗಿದೆ.

**ಕೃಷ್ಣರಾಜಸಾಗರ ಅಣೆಕಟ್ಟೆ ಯೋಜನೆ:** ದಿವಾನ್ ಟಿ.ಆನಂದರಾವ್ ಅವರ ಆಡಳಿತಾವಧಿಯ ಅತ್ಯಂತ ಮಹತ್ವದ ಮತ್ತು ದೂರಗಾಮಿ ಪರಿಣಾಮ ಬೀರಿದ ನಿರ್ಧಾರಗಳಲ್ಲಿ ಕೃಷ್ಣರಾಜಸಾಗರ ಅಣೆಕಟ್ಟೆ ಯೋಜನೆಗೆ ಚಾಲನೆ ನೀಡಿದುದು ಪ್ರಮುಖವಾಗಿದೆ. ಮೈಸೂರು ಸಂಸ್ಥಾನದ ಆರ್ಥಿಕ ಅಭಿವೃದ್ಧಿ, ಕೃಷಿ ವಿಸ್ತರಣೆ ಮತ್ತು ವಿದ್ಯುತ್ ಉತ್ಪಾದನೆಯ ದೃಷ್ಟಿಯಿಂದ ಈ ಯೋಜನೆಯು ಒಂದು ಐತಿಹಾಸಿಕ ಮೈಲಿಗಲ್ಲಾಗಿತ್ತು. ಕಾವೇರಿ ನದಿಯ ನೀರು ಬಹುಪಾಲು ಮದ್ರಾಸ್ ಪ್ರೆಸಿಡೆನ್ಸಿಯ ಪ್ರದೇಶಗಳಿಗೆ ಹರಿದು ಹೋಗುತ್ತಿತ್ತು. ಮೈಸೂರು ಸಂಸ್ಥಾನದಲ್ಲಿ ಲಭ್ಯವಿದ್ದ ಜಲಸಂಪನ್ಮೂಲಗಳನ್ನು ಸಮರ್ಪಕವಾಗಿ

ಬಳಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಈ ಸಮಸ್ಯೆಯನ್ನು ಮನಗಂಡ ಮೈಸೂರು ಆಡಳಿತವು ಕಾವೇರಿ ನದಿಗೆ ದೊಡ್ಡ ಅಣೆಕಟ್ಟೆಯನ್ನು ನಿರ್ಮಿಸಿ ನೀರನ್ನು ಸಂಗ್ರಹಿಸುವ ಯೋಜನೆಯನ್ನು ರೂಪಿಸಿ 1911–12ರಲ್ಲಿ ಅಣೆಕಟ್ಟೆ ನಿರ್ಮಾಣದ ಕಾರ್ಯವನ್ನು ಪ್ರಾರಂಭಿಸಲು ಸರ್ ಎಂ.ವಿಶ್ವೇಶ್ವರಯ್ಯ ಅವರ ತಾಂತ್ರಿಕ ಪರಿಣತಿ ಮತ್ತು ದಿವಾನ್ ಟಿ.ಆನಂದರಾವ್ ಅವರ ಆಡಳಿತಾತ್ಮಕ ಬೆಂಬಲ ಪ್ರಮುಖವಾಗಿತ್ತು. ಈ ಯೋಜನೆಗೆ ಎಂಭತ್ತೊಂಬತ್ತು ಲಕ್ಷದಷ್ಟು ಹಣವನ್ನು ವೆಚ್ಚಮಾಡಲು ಅಂದಾಜಿಸಲಾಗಿತ್ತು. ಈ ಯೋಜನೆಯ ಪ್ರಕಾರ ಸುಮಾರು 11,030 ಮಿಲಿಯನ್ ಘನ ಅಡಿ ನೀರನ್ನು ಸಂಗ್ರಹಿಸುವ ಗುರಿಯನ್ನು ಮತ್ತು ಸುಮಾರು 97 ಅಡಿಗಳು ಅಣೆಕಟ್ಟೆಯ ಎತ್ತರವನ್ನು ಎಂದು ನಿರ್ಧರಿಸಲಾಯಿತು. ಈ ಯೋಜನೆಯಿಂದ ಸಂಗ್ರಹಿಸಿದ ನೀರನ್ನು ಬಳಸಿಕೊಂಡು ಶಿವನಸಮುದ್ರ ಜಲವಿದ್ಯುತ್ ಕೇಂದ್ರದ ಸಾಮರ್ಥ್ಯವನ್ನು ಹೆಚ್ಚಿಸುವುದು. ಕೈಗಾರಿಕೆಗಳು ಮತ್ತು ನಗರ ಪ್ರದೇಶಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಸರಬರಾಜು ಮಾಡುವುದು. ಆದರೆ ಈ ಯೋಜನೆಗೆ ಅಂದಿನ ಮದ್ರಾಸ್ ಸರ್ಕಾರವು ತೀವ್ರ ವಿರೋಧ ವ್ಯಕ್ತಪಡಿಸಿತು. ಕಾವೇರಿ ನದಿಯ ಮೇಲ್ಭಾಗದಲ್ಲಿ ಮೈಸೂರು ಸಂಸ್ಥಾನ ದೊಡ್ಡ ಪ್ರಮಾಣದಲ್ಲಿ ನೀರನ್ನು ತಡೆಹಿಡಿದರೆ, ಕೆಳಭಾಗದ ಪ್ರದೇಶಗಳ ಕೃಷಿಗೆ ಹಾನಿಯಾಗಬಹುದು ಎಂಬ ವಾದವನ್ನು ಮದ್ರಾಸ್ ಆಡಳಿತ ಮಂಡಿಸಿತು. ಇದರಿಂದ ಕಾವೇರಿ ನೀರಿನ ಹಂಚಿಕೆ ಕುರಿತ ವಿವಾದ ತೀವ್ರಗೊಂಡು, ಎರಡೂ ಆಡಳಿತಗಳ ನಡುವೆ ಕಾನೂನು ಹೋರಾಟದ ಪರಿಸ್ಥಿತಿ ನಿರ್ಮಾಣವಾಯಿತು. ಈ ಯೋಜನೆಗೆ ಚಾಲನೆ ನೀಡುವ ಮೂಲಕ ದಿವಾನ್ ಟಿ.ಆನಂದ ರಾವ್ ಅವರು ಮೈಸೂರು ರಾಜ್ಯದ ಆಧುನಿಕ ಅಭಿವೃದ್ಧಿಯ ಇತಿಹಾಸದಲ್ಲಿ ಶಾಶ್ವತ ಸ್ಥಾನವನ್ನು ಪಡೆದಿದ್ದಾರೆ.

**ಆರ್ಥಿಕ ಸಮ್ಮೇಳನ:** ದಿವಾನ್ ಟಿ.ಆನಂದರಾವ್ ಅವರ ಆಡಳಿತಾವಧಿಯಲ್ಲಿ ನಡೆಸಿದ ಮೈಸೂರು ರಾಜ್ಯದ ಮೊದಲ ಆರ್ಥಿಕ ಸಮ್ಮೇಳನವು ಮೈಸೂರು ಸಂಸ್ಥಾನದ ಆರ್ಥಿಕ ಯೋಜನೆ, ಅಭಿವೃದ್ಧಿ ಚಿಂತನೆ ಮತ್ತು ಜನಪರ ಆಡಳಿತದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸಿತು. ಈ ಸಮ್ಮೇಳನದ ಪರಿಕಲ್ಪನೆಗೆ ರಾಜರ್ಷಿ ಶ್ರೀನಾಲ್ವಡಿ ಕೃಷ್ಣರಾಜಒಡೆಯರ್ ಅವರ ಪ್ರೋತ್ಸಾಹ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ಅವರ ಸಲಹೆಗಳು ಪ್ರಮುಖ ಆಧಾರವಾಗಿದ್ದವು. ಮೈಸೂರು ಸಂಸ್ಥಾನದಲ್ಲಿ ಈಗಾಗಲೇ ಪ್ರಜಾಪ್ರತಿನಿಧಿ ಸಭೆ ಅಸ್ತಿತ್ವದಲ್ಲಿದ್ದರೂ, ಅದು ವರ್ಷಕ್ಕೊಮ್ಮೆ ದಸರಾ ಸಂದರ್ಭದಲ್ಲಿ ಮಾತ್ರ ಸಭೆ ಸೇರುತ್ತಿತ್ತು. ಹೆಚ್ಚಿನ ಸದಸ್ಯರನ್ನು ಹೊಂದಿದ್ದ ಈ ಸಭೆಯಲ್ಲಿ ಆಡಳಿತ, ಸಾಮಾಜಿಕ ಮತ್ತು ರಾಜಕೀಯ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿದ್ದರೂ, ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳ ಕುರಿತು ಸುದೀರ್ಘ ಮತ್ತು ಪರಿಣತ ಚರ್ಚೆ ನಡೆಸಲು ಅವಕಾಶ ಸೀಮಿತವಾಗಿತ್ತು. ಈ ಕೊರತೆಯನ್ನು ಮನಗಂಡ ಟಿ.ಆನಂದರಾವ್ ಅವರು ಆರ್ಥಿಕ ಅಭಿವೃದ್ಧಿಯನ್ನು ಕೇಂದ್ರೀಕರಿಸಿದ ಪ್ರತ್ಯೇಕ

ವೇದಿಕೆಯ ಅಗತ್ಯವನ್ನು ಗುರುತಿಸಿದರು. 1911ನೇ ಜೂನ್ 10ರಂದು ಮೈಸೂರು ಸಂಸ್ಥಾನದ ಪ್ರಥಮ ಆರ್ಥಿಕ ಸಮ್ಮೇಳನ ಆರಂಭವಾಯಿತು. ಈ ಸಮ್ಮೇಳನವನ್ನು ಉದ್ಘಾಟಿಸಿದ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸಂಸ್ಥಾನದ ಆರ್ಥಿಕ ಪ್ರಗತಿಯೇ ಇದರ ಮುಖ್ಯ ಉದ್ದೇಶವೆಂದು ಸ್ಪಷ್ಟಪಡಿಸಿದರು. ರಾಜ್ಯದ ಸಾರಿಗೆ ಸಂಪರ್ಕವನ್ನು ವಿಸ್ತರಿಸುವುದು, ವಿದ್ಯುತ್ ಮತ್ತು ಯಾಂತ್ರಿಕ ಶಕ್ತಿಯ ಬಳಕೆಯನ್ನು ಹೆಚ್ಚಿಸುವುದು, ಕೃಷಿ ಮತ್ತು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಜನರ ಜೀವನಮಟ್ಟವನ್ನು ಸುಧಾರಿಸುವುದು ಸಮ್ಮೇಳನದ ಪ್ರಮುಖ ಗುರಿಗಳಾಗಿದ್ದವು. ಮಹಾರಾಜರು ತಮ್ಮ ಉದ್ಘಾಟನಾ ಭಾಷಣದಲ್ಲಿ ರಾಜ್ಯದ ಆರ್ಥಿಕ ಸಮೃದ್ಧಿಯು ಸರ್ಕಾರದ ನಿರಂತರ ಚಿಂತನೆಯ ವಿಷಯವಾಗಿರಬೇಕು ಮತ್ತು ಜನರ ಜೀವನೋಪಾಯವನ್ನು ಸುಧಾರಿಸುವ ಎಲ್ಲ ಮಾರ್ಗಗಳನ್ನು ಅನ್ವೇಷಿಸಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದರು. ಈ ಮೂಲಕ ಆರ್ಥಿಕ ಅಭಿವೃದ್ಧಿಯನ್ನು ರಾಜ್ಯಾಡಳಿತದ ಕೇಂದ್ರಬಿಂದುವಾಗಿಸುವ ಪ್ರಯತ್ನ ನಡೆಯಿತು. ಈ ಸಮ್ಮೇಳನದಲ್ಲಿ ಬಹುಮುಖ್ಯವಾಗಿ; ಕೃಷಿಯ ಅಭಿವೃದ್ಧಿ; ಶಿಕ್ಷಣದ ವಿಸ್ತರಣೆ; ಕೈಗಾರಿಕಾ ಉತ್ಪಾದನೆಯ ಹೆಚ್ಚಳ; ವ್ಯಾಪಾರ ಮತ್ತು ವಾಣಿಜ್ಯದ ಪ್ರೋತ್ಸಾಹ; ತಾಂತ್ರಿಕ ತರಬೇತಿ, ಗ್ರಾಮೀಣ ಆರ್ಥಿಕತೆಯ ಬಲವರ್ಧನೆಯಂತಹ ಈ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ಕೃಷಿ ಸಮಿತಿ, ಶಿಕ್ಷಣ ಸಮಿತಿ, ಕೈಗಾರಿಕೆ ಮತ್ತು ವಾಣಿಜ್ಯ ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಧ್ಯಯನ ನಡೆಸಿ ಸರ್ಕಾರಕ್ಕೆ ಶಿಫಾರಸುಗಳನ್ನು ಸಲ್ಲಿಸುತ್ತಿದ್ದವು. ಅನಂತರದ ಅವಧಿಯಲ್ಲಿ ಈ ಸಮಿತಿಗಳು ಮೈಸೂರು ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಮಾರ್ಗದರ್ಶಕ ಸಂಸ್ಥೆಗಳಾಗಿ ರೂಪುಗೊಂಡವು. ಈ ಸಮ್ಮೇಳನದ ಮೂಲಕ ದಿವಾನ್ ಟಿ.ಆನಂದ ರಾವ್ ಅವರು ಆಡಳಿತದಲ್ಲಿ ಜನಸಹಭಾಗಿತ್ವ, ತಜ್ಞರ ಸಲಹೆ ಮತ್ತು ವೈಜ್ಞಾನಿಕ ಯೋಜನೆಗಳ ಮಹತ್ವವನ್ನು ಪ್ರತಿಪಾದಿಸಿದರು. ಅನಂತರದ ಅವಧಿಯಲ್ಲಿ ಸರ್ ಎಂ.ವಿಶ್ವೇಶ್ವರಯ್ಯ ಅವರ ನೇತೃತ್ವದಲ್ಲಿ ನಡೆದ ಕೈಗಾರಿಕಾ ಮತ್ತು ಆರ್ಥಿಕ ಪ್ರಗತಿಗೆ ಈ ಸಮ್ಮೇಳನವೇ ಬಲವಾದ ಅಡಿಪಾಯವಾಗಿ ಪರಿಣಮಿಸಿತು.

**ಕಡ್ಡಾಯ ಪ್ರಾಥಮಿಕ ಶಿಕ್ಷಣ ಮತ್ತು ಆಡಳಿತಾತ್ಮಕ ಸುಧಾರಣೆಗಳು:** ದಿವಾನ್ ಟಿ.ಆನಂದರಾವ್ ಅವರ ಆಡಳಿತಾವಧಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸುವ ಪ್ರಯತ್ನವು ಪ್ರಮುಖ ಸಾಧನೆಗಳಲ್ಲಿ ಒಂದಾಗಿದೆ. ಶಿಕ್ಷಣವು ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಮೂಲಾಧಾರ ಎಂಬ ಅರಿವಿನಿಂದ ಮೈಸೂರು ಸರ್ಕಾರವು ಶಿಕ್ಷಣದ ವಿಸ್ತರಣೆಗೆ ಹೆಚ್ಚಿನ ಆದ್ಯತೆ ನೀಡಿತು. ಈ ಪ್ರಯತ್ನಗಳು ಮುಂದಿನ ದಿನಗಳಲ್ಲಿ ಮೈಸೂರು ಸಂಸ್ಥಾನವನ್ನು ಭಾರತದ ಅತ್ಯಂತ ಶೈಕ್ಷಣಿಕವಾಗಿ ಮುಂದುವರಿದ ಪ್ರದೇಶಗಳಲ್ಲಿ ಒಂದಾಗಿ ರೂಪಿಸುವಲ್ಲಿ ನೆರವಾದವು. ಶಿಕ್ಷಣದ ಅಭಿವೃದ್ಧಿಗೆ ಸಂಬಂಧಿಸಿದಂತೆ ನೇಮಕಗೊಂಡಿದ್ದ ವಿಶೇಷ ಆಯೋಗವು ಶಿಕ್ಷಣ ಸಂಸ್ಥೆಗಳ ಸಂಖ್ಯೆಯನ್ನು ಹೆಚ್ಚಿಸುವುದು,

ಗುಣಮಟ್ಟವನ್ನು ಸುಧಾರಿಸುವುದು ಹಾಗೂ ಸಾರ್ವಜನಿಕರಿಗೆ ಶಿಕ್ಷಣದ ಲಭ್ಯತೆಯನ್ನು ವಿಸ್ತರಿಸುವ ಕುರಿತು ಹಲವು ಶಿಫಾರಸುಗಳನ್ನು ಮಾಡಿತು. ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರದಿಂದ ಅನುದಾನ ನೀಡುವ ವ್ಯವಸ್ಥೆಯನ್ನು ಬಲಪಡಿಸಲು ಶಿಫಾರಸು ಮಾಡಲಾಯಿತು. ಇದರ ಪರಿಣಾಮವಾಗಿ ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ಬೆಳವಣಿಗೆಗೆ ಉತ್ತೇಜನ ದೊರೆಯಿತು. ಆರ್ಥಿಕ ಸಮ್ಮೇಳನದಲ್ಲಿ ಶಿಕ್ಷಣವನ್ನು ಅಭಿವೃದ್ಧಿಯ ಪ್ರಮುಖ ಅಂಶವೆಂದು ಪರಿಗಣಿಸಲಾಗಿದ್ದು, ಕಡ್ಡಾಯ ಶಿಕ್ಷಣದ ಕಲ್ಪನೆಗೆ ಸಂಸ್ಥಾನ ಮಟ್ಟದಲ್ಲಿ ವ್ಯಾಪಕ ಬೆಂಬಲ ದೊರೆಯಿತು. ಇದರಿಂದ ಮುಂದಿನ ವರ್ಷಗಳಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಅನುಷ್ಠಾನಕ್ಕೆ ಅಗತ್ಯವಾದ ಆಡಳಿತಾತ್ಮಕ ಮತ್ತು ನೀತಿಪರ ನೆಲೆ ಸಿದ್ಧವಾಯಿತು.

**ಉನ್ನತ ಶಿಕ್ಷಣ ಮತ್ತು ಜ್ಞಾನ ಸಂಸ್ಥೆಗಳ ಬೆಳವಣಿಗೆ:** ಟಿ.ಆನಂದ ರಾವ್ ಅವರ ಕಾಲದಲ್ಲಿ ಮೈಸೂರು ರಾಜ್ಯದ ಶೈಕ್ಷಣಿಕ ಮತ್ತು ಬೌದ್ಧಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ; ಮೈಸೂರು ಬ್ಯಾಂಕಿನ ಸ್ಥಾಪನೆ ಕುರಿತು ಯೋಜನೆಗಳು ರೂಪುಗೊಂಡವು. ಮೈಸೂರು ಛೇಂಬರ್ ಆಫ್ ಕಾಮರ್ಸ್‌ನ ಬೆಳವಣಿಗೆಗೆ ಪ್ರೋತ್ಸಾಹ ದೊರೆಯಿತು. ಭದ್ರಾವತಿ ಉಕ್ಕಿನ ಕೈಗಾರಿಕೆಯ ಸ್ಥಾಪನೆಗೆ ಸಂಬಂಧಿಸಿದ ಪ್ರಾಥಮಿಕ ಚರ್ಚೆಗಳು ನಡೆದವು. ಕನ್ನಡಿಗರು ಉನ್ನತ ಶಿಕ್ಷಣಕ್ಕಾಗಿ ಮದ್ರಾಸ್ ವಿಶ್ವವಿದ್ಯಾನಿಲಯದ ಅವಲಂಬನೆಯಿಂದ ಹೊರಬರಬೇಕೆಂಬ ಅಭಿಪ್ರಾಯ ಬಲಗೊಂಡಿತು. ಪ್ರತ್ಯೇಕ ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆಯ ಕುರಿತು ಗಂಭೀರ ಚಿಂತನೆ ಆರಂಭವಾಯಿತು. ಈ ಎಲ್ಲಾ ವಿಚಾರಗಳಿಗೆ ಚರ್ಚೆಯ ವೇದಿಕೆಯನ್ನು ಒದಗಿಸಿದ ಪ್ರಮುಖ ಸಂಸ್ಥೆಯೆಂದರೆ ಮೈಸೂರು ಆರ್ಥಿಕ ಸಮ್ಮೇಳನ. ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನು ಸಮಗ್ರವಾಗಿ ಚರ್ಚಿಸುವ ಅವಕಾಶ ಈ ಸಮ್ಮೇಳನದ ಮೂಲಕ ದೊರೆಯಿತು.

**ಭಾರತೀಯ ವಿಜ್ಞಾನ ಸಂಸ್ಥೆಗೆ ಬೆಂಬಲ:** 1909ರಲ್ಲಿ ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯು ತನ್ನ ಕಾರ್ಯಚಟುವಟಿಕೆಗಳನ್ನು ಆರಂಭಿಸಿತು. ಈ ಸಂಸ್ಥೆಯ ಸ್ಥಾಪನೆಗೆ ಮೈಸೂರು ಸರ್ಕಾರವು ಮಹತ್ವದ ಸಹಕಾರ ನೀಡಿತ್ತು. ಟಿ.ಆನಂದ ರಾವ್ ಅವರ ಆಡಳಿತದಲ್ಲಿ ಮೈಸೂರು ಸರ್ಕಾರವು ಸುಮಾರು ಐದು ಲಕ್ಷ ರೂಪಾಯಿಗಳ ಆರ್ಥಿಕ ನೆರವನ್ನು ಒದಗಿಸಿತು. ಆ ಕಾಲದ ಪರಿಸ್ಥಿತಿಯಲ್ಲಿ ಇದು ಬಹಳ ದೊಡ್ಡ ಮೊತ್ತವಾಗಿತ್ತು. ಭಾರತೀಯ ವಿಜ್ಞಾನ ಸಂಸ್ಥೆಯ ಸ್ಥಾಪನೆಯು ಕೇವಲ ಶಿಕ್ಷಣ ಕ್ಷೇತ್ರಕ್ಕೆ ಮಾತ್ರವಲ್ಲದೆ, ಮೈಸೂರು ಸಂಸ್ಥಾನದ ಕೈಗಾರಿಕಾ ಮತ್ತು ವೈಜ್ಞಾನಿಕ ಅಭಿವೃದ್ಧಿಗೂ ಮಹತ್ವದ ಉತ್ತೇಜನ ನೀಡಿತು. ಅನಂತರದ ದಿನಗಳಲ್ಲಿ ಮೈಸೂರು ರಾಜ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಆಧಾರಿತ ಕೈಗಾರಿಕೆಗಳ ಬೆಳವಣಿಗೆಗೆ ಈ ಸಂಸ್ಥೆ ಪ್ರಮುಖ ಕೇಂದ್ರವಾಯಿತು.

**ಆಡಳಿತಾತ್ಮಕ ಮತ್ತು ನಾಗರಿಕ ಸೇವಾ ಸುಧಾರಣೆಗಳು:** ದಿವಾನ್ ಟಿ.ಆನಂದ ರಾವ್ ಅವರ ಕಾಲವನ್ನು ಮೈಸೂರು ಮತ್ತು ಮದ್ರಾಸ್ ಮೂಲದ ಬ್ರಾಹ್ಮಣ ಅಧಿಕಾರಿಗಳ ನಡುವಿನ ಆಡಳಿತಾತ್ಮಕ

ಸ್ಪರ್ಧೆಯ ಕೊನೆಯ ಹಂತವೆಂದು ಕೆಲ ಇತಿಹಾಸಕಾರರು ಪರಿಗಣಿಸುತ್ತಾರೆ. ಈ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಸ್ಥಳೀಯ ಪ್ರತಿಭೆಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಅವರು ಕೆಲವು ಪ್ರಮುಖ ಸುಧಾರಣೆಗಳನ್ನು ಜಾರಿಗೆ ತಂದರು. ಈ ಹಿಂದೆ ಮೈಸೂರು ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಸ್ಪರ್ಧಿಸಲು ಮುಖ್ಯವಾಗಿ ಮದ್ರಾಸ್ ವಿಶ್ವವಿದ್ಯಾನಿಲಯದ ಪದವೀಧರರಿಗೆ ಮಾತ್ರ ಅವಕಾಶವಿತ್ತು. ಇದರಿಂದ ಮೈಸೂರು ಸಂಸ್ಥಾನದ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿತ್ತು. ಟಿ.ಆನಂದರಾವ್ ಅವರು ಈ ವ್ಯವಸ್ಥೆಯಲ್ಲಿ ಬದಲಾವಣೆ ತಂದು ಮೈಸೂರು ಸಂಸ್ಥಾನದ ಕಾಲೇಜುಗಳಲ್ಲಿ ಪದವಿ ಪಡೆದ ಅಭ್ಯರ್ಥಿಗಳಿಗೂ ನಾಗರಿಕ ಸೇವಾ ಪರೀಕ್ಷೆಗಳಿಗೆ ಹಾಜರಾಗುವ ಅವಕಾಶ ಕಲ್ಪಿಸಿದರು. ಈ ಕ್ರಮವು ಸ್ಥಳೀಯ ಪ್ರತಿಭೆಗಳ ಬೆಳವಣಿಗೆಗೆ ಮಹತ್ವದ ಉತ್ತೇಜನ ನೀಡಿತು. ಇದರ ಜೊತೆಗೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಡಳಿತಾಧಿಕಾರಿಗಳಿಗೆ ಪ್ರಾಯೋಗಿಕ ತರಬೇತಿ ವ್ಯವಸ್ಥೆ ಜಾರಿಗೊಳಿಸಲಾಯಿತು. ಆಡಳಿತದ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಅಧಿಕಾರಿಗಳಿಗೆ ಸೇವಾಪೂರ್ವ ಮತ್ತು ಸೇವಾ ಮಧ್ಯದ ತರಬೇತಿಯನ್ನು ನೀಡುವ ವ್ಯವಸ್ಥೆ ರೂಪುಗೊಂಡಿತು.

**ಸಹಕಾರ ಮತ್ತು ಕೈಗಾರಿಕಾ ಕ್ಷೇತ್ರದ ಸುಧಾರಣೆಗಳು:** ಸಹಕಾರ ಚಳವಳಿಯನ್ನು ಬಲಪಡಿಸುವ ನಿಟ್ಟಿನಲ್ಲಿ ಆಡಳಿತಾತ್ಮಕ ಪುನರ್‌ವ್ಯವಸ್ಥೆ ಕೈಗೊಳ್ಳಲಾಯಿತು. ಸಹಕಾರ ಇಲಾಖೆಯ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಹಿಂದಿನ ವ್ಯವಸ್ಥೆಯ ಬದಲಿಗೆ ಡೆಪ್ಯೂಟಿ ಕಮಿಷನರ್ ಹುದ್ದೆಗೆ ಸಮಾನವಾದ ಉಪಕಾರ್ಯದರ್ಶಿ ಹುದ್ದೆ ಸೃಷ್ಟಿಸಲಾಯಿತು. ಇದರಿಂದ ಇಲಾಖೆಯ ಕಾರ್ಯನಿರ್ವಹಣೆಗೆ ಹೆಚ್ಚಿನ ಆಡಳಿತಾತ್ಮಕ ಬಲ ದೊರೆಯಿತು. ಇದೇ ಅವಧಿಯಲ್ಲಿ ಕೈಗಾರಿಕಾ ಶಿಕ್ಷಣದ ಪ್ರಸಾರಕ್ಕೆ ವಿಶೇಷ ಯೋಜನೆಗಳನ್ನು ರೂಪಿಸಲಾಯಿತು. ಯುವಜನರಿಗೆ ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣವನ್ನು ಒದಗಿಸುವ ಮೂಲಕ ಹೊಸ ಕೈಗಾರಿಕೆಗಳ ಸ್ಥಾಪನೆಗೆ ಅನುಕೂಲಕರ ವಾತಾವರಣ ನಿರ್ಮಿಸುವ ಗುರಿಯನ್ನು ಸರ್ಕಾರ ಹೊಂದಿತ್ತು. ಈ ಯೋಜನೆಗಳು ಮುಂದಿನ ದಿನಗಳಲ್ಲಿ ಮೈಸೂರು ರಾಜ್ಯದಲ್ಲಿ ಕೈಗಾರಿಕೀಕರಣದ ವೇಗವನ್ನು ಹೆಚ್ಚಿಸುವಲ್ಲಿ ಸಹಕಾರಿಯಾದವು. ಟಿ.ಆನಂದ ರಾವ್ ಅವರ ಆಡಳಿತಾವಧಿಯು ಶಿಕ್ಷಣ, ಆಡಳಿತ ಮತ್ತು ಕೈಗಾರಿಕಾ ಅಭಿವೃದ್ಧಿಯ ಕ್ಷೇತ್ರಗಳಲ್ಲಿ ದೂರಗಾಮಿ ಪರಿಣಾಮ ಬೀರಿದ ಸುಧಾರಣೆಗಳ ಕಾಲವಾಗಿತ್ತು. ಕಡ್ಡಾಯ ಶಿಕ್ಷಣದ ಕಲ್ಪನೆ, ಸ್ಥಳೀಯ ಪ್ರತಿಭೆಗಳಿಗೆ ನಾಗರಿಕ ಸೇವೆಯಲ್ಲಿ ಅವಕಾಶ, ಭಾರತೀಯ ವಿಜ್ಞಾನ ಸಂಸ್ಥೆಗೆ ನೀಡಿದ ಬೆಂಬಲ, ಕೈಗಾರಿಕಾ ಶಿಕ್ಷಣದ ಉತ್ತೇಜನ ಹಾಗೂ ಆಡಳಿತಾತ್ಮಕ ತರಬೇತಿ ವ್ಯವಸ್ಥೆಗಳ ಮೂಲಕ ಅವರು ಮೈಸೂರು ರಾಜ್ಯದ ಆಧುನಿಕೀಕರಣಕ್ಕೆ ಬಲವಾದ ಅಡಿಪಾಯ ಹಾಕಿದರು. ಅನಂತರದ ಅವಧಿಯಲ್ಲಿ ಸರ್ ಎಂ.ವಿಶ್ವೇಶ್ವರಯ್ಯ ಅವರ

ನೇತೃತ್ವದಲ್ಲಿ ಕಂಡುಬಂದ ವೇಗದ ಅಭಿವೃದ್ಧಿಗೆ ಈ ಕ್ರಮಗಳು ಮೂಲಭೂತ ನೆಲೆಯಾಗಿ ಕಾರ್ಯನಿರ್ವಹಿಸಿದವು.

**ರೈಲ್ವೆ ಯೋಜನೆಗಳು:** ದಿವಾನ್ ಟಿ.ಆನಂದರಾವ್ ಅವರು ರೈಲ್ವೆ ಜಾಲವನ್ನು ವಿಸ್ತರಿಸುವ ಮಹತ್ವಾಕಾಂಕ್ಷೆಯ ಕಾರ್ಯಕ್ರಮವನ್ನು ರೂಪಿಸಿದರು. ಅವರ ಆಡಳಿತದಲ್ಲಿ ಕನಿಷ್ಠ ಎರಡು ನೂರು ಮೈಲುಗಳಷ್ಟು ಹೊಸ ರೈಲು ಮಾರ್ಗಗಳನ್ನು ನಿರ್ಮಿಸುವ ಯೋಜನೆ ಸಿದ್ಧಪಡಿಸಲಾಯಿತು. ರೈಲ್ವೆ ಕಾಮಗಾರಿಗಳನ್ನು ಹೆಚ್ಚು ವ್ಯವಸ್ಥಿತವಾಗಿ ನಿರ್ವಹಿಸುವ ಉದ್ದೇಶದಿಂದ ರಾಜ್ಯ ರೈಲ್ವೆ ನಿರ್ಮಾಣ ಇಲಾಖೆಯನ್ನು ಸ್ಥಾಪಿಸಲಾಯಿತು. ಈ ಇಲಾಖೆಯ ಮುಖ್ಯ ಇಂಜಿನಿಯರಾಗಿ ಇ.ಎ.ಎಸ್.ಬೆಲ್ ಅವರನ್ನು ನೇಮಿಸಲಾಯಿತು. ರೈಲ್ವೆ ಅಭಿವೃದ್ಧಿಗೆ ಪ್ರತ್ಯೇಕ ಆಡಳಿತಾತ್ಮಕ ಮಹತ್ವ ನೀಡುವ ಸಲುವಾಗಿ ರೈಲ್ವೆ ವಿಭಾಗವನ್ನು ಲೋಕೋಪಯೋಗಿ ಇಲಾಖೆಯಿಂದ ಪ್ರತ್ಯೇಕಗೊಳಿಸಲಾಯಿತು. ಈ ಕ್ರಮವು ಮೈಸೂರು ಸಂಸ್ಥಾನದ ಸಾರಿಗೆ ನೀತಿಯಲ್ಲಿ ಹೊಸ ದಿಕ್ಕನ್ನು ಸೂಚಿಸಿತು.

**ಬ್ರಿಟಿಷ್ ಸರ್ಕಾರದೊಂದಿಗೆ ಸಂಬಂಧಗಳು:** ಟಿ.ಆನಂದರಾವ್ ಅವರು ರಾಜತಾಂತ್ರಿಕ ದೃಷ್ಟಿಯಿಂದ ಅತ್ಯಂತ ಎಚ್ಚರಿಕೆಯಿಂದ ನಡೆದುಕೊಂಡ ಆಡಳಿತಗಾರರಾಗಿದ್ದರು. ಬೆಂಗಳೂರಿನ ಕ್ಯಾಂಟೋನ್ಮೆಂಟ್ ಸಂಬಂಧಿಸಿದ ಕಂದಾಯ ಮತ್ತು ಆಡಳಿತಾತ್ಮಕ ವಿಚಾರಗಳಲ್ಲಿ ಅವರು ಬ್ರಿಟಿಷ್ ಸರ್ಕಾರದೊಂದಿಗೆ ಸತತ ಮಾತುಕತೆ ನಡೆಸಿದರು. ಮೈಸೂರು ಸಂಸ್ಥಾನದ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಜೊತೆಗೆ ಬ್ರಿಟಿಷರೊಂದಿಗೆ ನೇರ ಸಂಘರ್ಷವನ್ನು ತಪ್ಪಿಸುವ ನೀತಿಯನ್ನು ಅವರು ಅನುಸರಿಸಿದರು. ಪ್ರಗತಿಯನ್ನು ಸಾಧಿಸಬೇಕು; ಆದರೆ ಬ್ರಿಟಿಷ್ ಸರ್ಕಾರದೊಂದಿಗೆ ಅನಗತ್ಯ ವೈಷಮ್ಯವನ್ನು ಬೆಳೆಸಬಾರದು ಎಂಬುದು ಇವರ ಆಡಳಿತದ ಮೂಲತತ್ವವಾಗಿತ್ತು. ಆದ್ದರಿಂದಲೇ ಮೈಸೂರು ರಾಜ್ಯದ ಆಧುನಿಕ ಅಭಿವೃದ್ಧಿಯ ಇತಿಹಾಸದಲ್ಲಿ ಟಿ.ಆನಂದರಾವ್ ಅವರನ್ನು ಅಭಿವೃದ್ಧಿಯ ಶಿಲ್ಪಿ ಹಾಗೂ ಪರಿವರ್ತನೆಯ ಮುಂಚೂಣಿ ದಿವಾನ್ ಎಂದು ಕರೆಯುವುದು ಸಮಂಜಸವಾಗಿದೆ.

**ಗೌರವಗಳು ಮತ್ತು ನಿವೃತ್ತಿ:** ದಿವಾನ್ ಟಿ.ಆನಂದ ರಾವ್ ಅವರ ಸೇವೆಯನ್ನು ಗುರುತಿಸಿ ಬ್ರಿಟಿಷ್ ಸರ್ಕಾರವು ಅವರಿಗೆ ಮೈಸೂರು ಸಂಸ್ಥಾನದ ಅಭಿವೃದ್ಧಿಗೆ ನೀಡಿದ ಅಮೂಲ್ಯ ಕೊಡುಗೆಯನ್ನು ಪರಿಗಣಿಸಿ ಮಹಾರಾಜ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಧಾನ ಶಿರೋಮಣಿ ಎಂಬ ಗೌರವ ಬಿರುದನ್ನು ನೀಡಿದರು. ಈ ಬಿರುದು ಮೈಸೂರು ಸಂಸ್ಥಾನದ ಆಡಳಿತ ಇತಿಹಾಸದಲ್ಲಿ ಅತ್ಯುನ್ನತ ಗೌರವಗಳಲ್ಲಿ ಒಂದಾಗಿದೆ. ಮೂರುವರೆ ವರ್ಷಗಳ ಯಶಸ್ವಿ ಆಡಳಿತದ ಅನಂತರ ಅವರು 1912ರ ನವೆಂಬರ್ 10ರಂದು ದಿವಾನರ ಹುದ್ದೆಯಿಂದ ನಿವೃತ್ತರಾದರು.

**ಉಪಸಂಹಾರ:** ದಿವಾನ್ ಟಿ.ಆನಂದರಾವ್ ಅವರ ಆಡಳಿತಾವಧಿಯು ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ಒಂದು ಮಹತ್ವದ ಪರಿವರ್ತನಾ ಘಟ್ಟವಾಗಿದೆ. ಅವರ ಆಡಳಿತದಲ್ಲಿ ಮೈಸೂರು–ಮದ್ರಾಸ್

ಅಧಿಕಾರಿಗಳ ನಡುವಿನ ದೀರ್ಘಕಾಲದ ಸಂಘರ್ಷ ಅಂತ್ಯಗೊಂಡಿತು. ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಸ್ಥಿರತೆ ಮತ್ತು ಸಮತೋಲನ ನೆಲೆಗೊಂಡಿತು. ಕೃಷ್ಣರಾಜಸಾಗರ ಅಣೆಕಟ್ಟೆ ಯೋಜನೆಗೆ ಚಾಲನೆ, ಮೊದಲ ಆರ್ಥಿಕ ಸಮ್ಮೇಳನದ ಆಯೋಜನೆ, ರೈಲ್ವೆ ವಿಸ್ತರಣೆ, ಕೈಗಾರಿಕಾ ಅಭಿವೃದ್ಧಿಯ ರೂಪುರೇಷೆ, ಕಡ್ಡಾಯ ಶಿಕ್ಷಣದ ಕಲ್ಪನೆ ಮತ್ತು ಸ್ಥಳೀಯ ಪ್ರತಿಭೆಗಳಿಗೆ ಅವಕಾಶ ಕಲ್ಪಿಸುವಂತಹ ಕ್ರಮಗಳು ಮೈಸೂರು ರಾಜ್ಯದ ಭವಿಷ್ಯದ ಅಭಿವೃದ್ಧಿಗೆ ಭದ್ರವಾದ ಅಡಿಪಾಯವನ್ನು ಹಾಕಿದವು. ಸಾಹಿತ್ಯ, ಆಡಳಿತ ಮತ್ತು ಸಾರ್ವಜನಿಕ ಜೀವನದ ಬಗ್ಗೆ ಸಮತೋಲನದ ದೃಷ್ಟಿಕೋನ ಹೊಂದಿದ್ದ ಟಿ.ಆನಂದ ರಾವ್ ಅವರು ಅತಿರೇಕಗಳಿಲ್ಲದ ಆಡಳಿತಗಾರರಾಗಿದ್ದರು. ಆಧುನಿಕ ಮೈಸೂರಿನ ನಿರ್ಮಾತೃ ಎಂದು ಸರ್ ಎಂ.ವಿಶ್ವೇಶ್ವರಯ್ಯ ಅವರಿಗೆ ಸಲ್ಲುವ ಕೀರ್ತಿಯ ಹಿಂದೆ, ಆ ಸಾಧನೆಗಳಿಗೆ ಅಗತ್ಯವಾದ ಸಾಂಸ್ಥಿಕ, ಆರ್ಥಿಕ ಮತ್ತು ಆಡಳಿತಾತ್ಮಕ ನೆಲೆಯನ್ನು ನಿರ್ಮಿಸಿದ ಟಿ.ಆನಂದರಾವ್ ಅವರ ಕೊಡುಗೆ ಅಡಗಿದೆ. ಟಿ.ಆನಂದ ರಾವ್ ಅವರನ್ನು ಕೇವಲ ಒಂದು ಮಧ್ಯಂತರ ದಿವಾನರಾಗಿ ನೋಡುವುದಕ್ಕಿಂತ, ಆಧುನಿಕ ಮೈಸೂರು ರಾಜ್ಯದ ಅಭಿವೃದ್ಧಿಗೆ ಅಡಿಪಾಯ ಹಾಕಿದ ಶಾಂತ ವಾಸ್ತುಶಿಲ್ಪಿ ಮತ್ತು ಪರಿವರ್ತನೆಯ ಮುಂಚೂಣಿ ಆಡಳಿತಗಾರ ಎಂದು ಗುರುತಿಸುವುದು ಹೆಚ್ಚು ಸಮಂಜಸವಾಗಿದೆ.

## ಗ್ರಂಥಸೂಚಿ


1. ಡಿ.ವಿ.ಜಿ, ಮೈಸೂರಿನ ದಿವಾನರುಗಳು ಜ್ಞಾಪಕ ಚಿತ್ರಶಾಲೆ, ಮೈಸೂರು
2. Neela Manjunath (ED) Jewels of Administration, Bangalore, 2012
3. Shamarao.M, Modern Mysore Vol-II
4. Subbarao Revivsed Memories, Madras, 1933